## SLUMS SITUATED ON PRIVATE LANDS IN BANGALORE CITY

327. Sri T. R. SHAMANNA (Fort).— Will the Minister for Municipal Administration be pleased to state :—

(a) the Number of slums existing in private lands in Bangalore City;

(b) whether th re is any proposal to acquire those lands for slum clearance and improvement as in the case of slums in the lands of Government, Corporation and City Improvement Trust Board;

(c) whether the Government intend to acquire and improve congested slums in Divisions No. 26 and 27 (Baba huts in Mysore Road and huts in Kalasipalyam)?

Sri B. BASAVALINGAPPA (Minister for Municipal Administration).—

(a) 73-List placed on the Table of th House*

(b) Yes-in 12 places.

(c) Yes.

ಶ್ರೀ ಟಿ. ಆರ್. ಶಾಮಣ್ಣ:— ಮಾನ್ಯ ಪೌರಾಡಳಿತ ಸಚಿವರು ಬೆಂಗಳೂರು ನಗರದಲ್ಲಿರತಕ್ಕ ಕೊಳಚೆ ಪ್ರದೇಶಗಳನ್ನು ಉತ್ತಮಪಡಿಸಬೇಕು ಎನ್ನುವ ಬಗ್ಗೆ ಆಸಕ್ತಿಯನ್ನು ವಹಿಸಿದ್ದಾರೆ. ಆದ್ದರಿಂದ ಬೆಂಗಳೂರು ನಗರದಲ್ಲಿರತಕ್ಕ ಖಾಸಗಿ ಜಮೀನಿನಲ್ಲಿರತಕ್ಕ ಸ್ಲಮ್‌ಗಳನ್ನು ತೆಗೆಯದಿದ್ದರೆ ಅವರ ಕಾರ್ಯ ಯಶಸ್ವಿಯಾಗುವುದಿಲ್ಲ. ಆದಕಾರಣ ಈ ಖಾಸಗೀ ಜಮೀನಿನಲ್ಲಿರತಕ್ಕ ಸ್ಲಮ್‌ಗಳನ್ನು ತೆಗೆಯಲು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ:— ಮಾನ್ಯ ಸದಸ್ಯರು ಹೇಳತಕ್ಕಂಥಾ ವಿಚಾರವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆ ಬಗ್ಗೆ ನನಗೆ ಆಸಕ್ತಿ ಇದೆ. ಆದರೆ ನಮ್ಮಲ್ಲಿ ಅಸ್ತ್ರ ಇರಲಿಲ್ಲ. ಈಗ ಮೊನ್ನೆತಾನೆ ಈ ಸಭೆಯಲ್ಲಿ ಸ್ಲಮ್ ಕ್ಲಿಯರೆನ್ಸ್ ಬಿಲ್ ಪಾಸು ಮಾಡಿದ್ದು ಆಗಿದೆ. ಈ ಬಿಲ್ಲನ್ನು ಮೇಲ್ಮನೆಯಲ್ಲಿ ಪಾಸು ಮಾಡಿಕೊಂಡು ಆದಷ್ಟು ಜಾಗ್ರತೆ ಅದನೆಲ್ಲಾ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.— ಬೆಂಗಳೂರು ನಗರದಲ್ಲಿ ಹೊಸ ಸ್ಲಮ್ ಆಗದ ಹಾಗೆ ಸರಕಾರದವರು ಎಚ್ಚರಿಕೆ ತೆಗೆದುಕೊಳ್ಳುವುದಕ್ಕೆ ತಕ್ಕ ಗಮನಕೊಡುತ್ತೀರಾ?

---

*Copy placed in the Mysore Legislature Library *vide* No. 22 / dated 28-9-73.

ಶ್ರೀ ಬಿ. ಬಸವಲಿಂಗಪ್ಪ.— ಹೊಸದಾಗಿ ಯಾರೇ ಕಾರ್ಪೋರೇಷನ್ ಏರಿಯಾಕ್ಕೆ ಬಂದು ಆ ರೀತಿ ಸ್ಲಮ್ ಕ್ರಿಯೇಟ್ ಮಾಡುವುದಕ್ಕೆ ಬಂದರೆ ನಿರ್ದಾಕ್ಷಿಣ್ಯವಾಗಿ ಕಾರ್ಪೋರೇಷನ್ನಿನವರು ಬಿಡುತ್ತಿಲ್ಲ. ಮೊನ್ನೆ ಬಾಗಲೂರು ಲೇ ಔಟನಲ್ಲಿ ಬೇರೆ ಪ್ರದೇಶದ ಜನ ಬಂದು ಗುಡಿಸಲು ಕಟ್ಟುವುದಕ್ಕೆ ಪ್ರಯತ್ನ ಮಾಡಿದರು ಆಗ ಯಾವ ದಾಕ್ಷಿಣ್ಯವೂ ಇಲ್ಲದೆ ಕಾರ್ಪೋರೇಷನ್ನಿನವರು ಅವರನ್ನು ಹೊರಗೆಹಾಕಿದಾರೆ. ಹೊಸದಾಗಿ ಮನೆ ಕಟ್ಟಸಲು ಪ್ರಯತ್ನಿಸಲಾಗುವುದನ್ನು ಒಲ್ಡ್ಡೀಜರ್ ಬಿಟ್ಟು ಅಡವಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಏನೇ ಡಿವಿಜನ್‌ನಲ್ಲಿ ೬ ಸ್ಲಮ್ ಏರಿಯಾಗಳು ಅನೇಕ ವರ್ಷಗಳಿಂದ ಇವೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದನ್ನು ಏತಕ್ಕೋಸ್ಕರ ಸ್ಲಮ್ ಡೆವಲಪ್‌ಮೆಂಟ್ ಸ್ಕೀಮಿನಲ್ಲಿ ಸೇರಿಸಲಿಲ್ಲ? ಈಗಲಾದರೂ ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ಕಾರ್ಪೋರೇಷನ್ ಮತ್ತು ಸರ್ಕಾರದ ಜಮೀನಿನಲ್ಲಿ ಕೊಳಚೆ ಪ್ರದೇಶಗಳ ನಿರ್ಮಾಣ ಆದರೆ ಇಂಪ್ರೂವಮೆಂಟ್ ಸ್ಕೀಮು ಜಾರಿಗೆ ಬರುತ್ತೇವೆ. ಬೇರೆ ಖಾಸಗಿ ಪ್ರದೇಶದಲ್ಲಿರತಕ್ಕ ಕೊಳಚೆ ಪ್ರದೇಶಗಳು ಏನಿವೆ ಅವುಗಳ ಬಗ್ಗೆ ಸ್ಲಮ್ ಕ್ಲಿಯರೆನ್ಸ್ ಆಕ್ಟ್ ಆದಮೇಲೆ ಕ್ರಮತೆಗೆದುಕೊಳ್ಳುತ್ತೇವೆ.

## NON-STOP M.S.R T.C. BUSES BETWEEN BANGALORE AND DAVANAGERE

372. Smt. NAGAMMA C. KESHAVA MURTHY (Davanagere). Will the Minister for Labour be pleased to state :—

(a) the number of buses running daily between Bangalore and Davanagere;

(b) out of them, the number of Non-stop services;

(c) whether the M.S.R.T.C. intend starting Non-stop services between Bangalore and Davangere;

(d) if so, when ?

Sri AZEEZ SAIT (Minister for Labour):—

(a) 14 buses each way.

(b) Nil.

(c) No.

(d) Does not arise.